**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ 32/2023**

ಪ್ರಾಸಾ–02

ಚಾಸಾ–02

| | | |
|---|---|---|
| ಸಾಕ್ಷಿಯ ಹೆಸರು | – | ರಮೇಶ ನಾಯಕ |
| ತಂದೆ ಹೆಸರು | – | ಬೋಜಾ |
| ವಯಸ್ಸು | – | 40 ವರ್ಷ |
| ಉದ್ಯೋಗ | – | ಇ ಎಸ್ ಐ ಆಸ್ಪತ್ರೆಯ, ಸುಶ್ರುಷಾಧಿಕಾರಿ |
| ವಾಸಸ್ಥಳ | – | ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | – | 25–02–2026 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ದಶರಥ ಮಾದರ ( ಚಾಸಾ–3) ಗೊತ್ತು. ಅವನು ನನ್ನ ಸಹೋದ್ಯೋಗಿ. ನಾನು 13 ವರ್ಷದಿಂದ ಇ ಎಸ್ ಐ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿಃ 21–03–2023 ನೇ ಸಾಲಿನಲ್ಲಿ ಠಾಣಾಧಿಕಾರಿಯಿಂದ ವೈದ್ಯಕೀಯ ಅಧೀಕ್ಷಕರಿಗೆ ಈ ರೀತಿ ಗಾಂಜಾ ಕೇಸು ಇದೆ ಪಂಚನಾಮೆಗೆ ಸರ್ಕಾರಿ ನೌಕರರನ್ನು ಕಳುಹಿಸಿಕೊಡಬೇಕೆಂದು ಮನವಿ ಪತ್ರ ಬಂದಿತ್ತು. ಹಳೆ ಹುಬ್ಬಳ್ಳಿ ಪೋಲೀಸ ಠಾಣೆಯ ಠಾಣಾಧಿಕಾರಿಗಳು ಆ ಪತ್ರ ಬರೆದಿದ್ದರು. ಆ ಪತ್ರ ಬಂದ ಮೇಲೆ ನಮಗೆ ಕರೆದು ಈ ವಿಚಾರ ಹೇಳಿದರು. ಪಂಚರಾಗಿ ಹೋಗಲು ವೈದ್ಯಕೀಯ ಅಧಿಕ್ಷಕರು ಆದೇಶ ಮಾಡಿದರು. ನಮ್ಮ ಸಾಹೇಬರಿಗೆ ಬಂದ ಮನವಿ ಪತ್ರ ಇದೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಶಾನೆ ಪಿಃ 5 ಎಂದು ಗುರುತಿಸಲಾಗಿದೆ. ನಮ್ಮನ್ನು ನೇಮಿಸಿ ಕಳುಹಿಸಿದ ಪತ್ರ ಇದೇ ಎಂದು ಸಾಕ್ಷಿ ನಿಶಾನೆ ಪಿಃ 6 ಪತ್ರ ನೋಡಿ ಗುರುತಿಸಿರುತ್ತಾರೆ. ನಾನು ಮತ್ತು ನನ್ನ ಸಹೋದ್ಯೋಗಿ ದಶರಥ ರವರು ಹಳೆ ಹುಬ್ಬಳ್ಳಿ ಪೋಲಿಸಠಾಣೆಗೆ ಬೆಳಿಗ್ಗೆ 11 ಘಂಟೆ ಸುಮಾರಿಗೆ ಬಂದೆವು. ಅಲ್ಲಿಗೆ ಹೋದಾಗ ಪೋಲೀಸನವರು ಈ ರೀತಿ ಕೇಸು ಬಂದಿದೆ ಪಂಚರಾಗಿ ಬನ್ನಿ ಎಂದು

ಹೇಳಿದರು. ಅಲ್ಲಿಗೆ ಬನ್ನಿ ಎಂದು ಬರವಣಿಗೆಯಲ್ಲಿ ಕೋರಿಕೆ ಪತ್ರ ಕೊಟ್ಟರು ಎಂದು ಸಾಕ್ಷಿ ನಿಶಾನೆ ಪಿಃ 7 ನೋಡಿ ಗುರುತಿಸಿರುತ್ತಾರೆ. ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ , ಆ ಸಹಿಯನ್ನು ಈಗಾಗಲೇ ನಿಶಾನೆ ಪಿಃ 7 (ಬಿ) ಎಂದು ಗುರುತಿಸಲಾಗಿದೆ. ಅದೇ ರೀತಿ ನಿಶಾನೆ ಪಿಃ 9 ರಂತೆ ದಶರಥರವರಿಗೆ ಕೂಡ ಪತ್ರ ಕೊಟ್ಟರು ಎಂದು ಸಾಕ್ಷಿ ದಶರಥರವರ ಸಹಿ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 9 (ಬಿ) ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಈಗ ನೋಡುತ್ತಿರುವ ನಿಶಾನೆ ಪಿಃ 8 ರಂತೆ ಒಪ್ಪಿಗೆ ಪತ್ರ ನೀಡಿರುತ್ತೇನೆ ಎಂದು ಸಾಕ್ಷಿ ಅದನ್ನು ಗುರುತಿಸಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ, ಆ ಸಹಿ ಈಗಾಗಲೇ ನಿಶಾನೆ ಪಿಃ 8 (ಬಿ) ಎಂದು ಗುರುತಿಸಲಾಗಿದೆ. ಅದೇರೀತಿ ದಶರಥರವರು ಕೊಟ್ಟ ಒಪ್ಪಿಗೆ ಪತ್ರ ಕೂಡ ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಶಾನೆ ಪಿಃ 10 ಎಂದು ಗುರುತಿಸಲಾಗಿದೆ. ಅದರಲ್ಲಿರುವ ದಶರಥರವರ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಶಾನೆ ಪಿಃ 10 (ಬಿ) ಎಂದು ಗುರುತಿಸಲಾಗಿದೆ.

3. ಆಗ ನಾವು ಅಲ್ಲಿದ್ದಾಗ ಎಸಿಪಿ ರವರು ಕೂಡ ಬಂದರು. ನಾವುಗಳು ಮತ್ತು ತೂಕ ಮಾಡುವವರು ಪೋಲೀಸರ ವಾಹನದಲ್ಲಿ ಹೋದೆವು. ಎಸಿಪಿಯವರು ಅವರು ಡಿಪಾರ್ಟಮೆಂಟ ಗಾಡಿಯಲ್ಲಿ ಬಂದರು. ಕೆಲವರು ಸಿಬ್ಬಂದಿಗಳು ಬೈಕಲ್ಲಿ ಬಂದರು , ಕೆಲವರು ನಮ್ಮ ಜೊತೆಯೇ ಬಂದರು. ಬೆಳಿಗ್ಗೆ 11 ಘಂಟೆ ಮೇಲ್ಪಟ್ಟು ನಾವು ಪೋಲಿಸಠಾಣೆ ಬಿಟ್ಟೆವು. ಅಲ್ಲಿಂದ ಆನಂದ ನಗರದ ಕುಷ್ಟರೋಗದ ಆಸ್ಪತ್ರೆ ಬಳಿ ಕರೆದುಕೊಂಡು ಹೋದರು. ನಾವು ಅಲ್ಲಿ ಹೋದಾಗ 4 ಜನ ಇದ್ದರು ಅದರಲ್ಲಿ 3 ಜನ ಓಡಿ ಹೋದರು, ಒಬ್ಬ ಮಾತ್ರ ಸಿಕ್ಕಿದ. ಆ 4 ಜನ ಕುಷ್ಟರೋಗ ಆಸ್ಪತ್ರೆ ಕಡೆಯಿಂದ ಬರುತ್ತಿದ್ದರು. ಆ 3 ಜನರನ್ನು ಹಿಡಿಯಲು ಪೋಲೀಸರು ಪ್ರಯತ್ನಪಟ್ಟರು ಬೈಕ ತೆಗೆದುಕೊಂಡು ಹೋದರು ಆದರೆ ಅವರು ಸಿಗಲಿಲ್ಲ. ಸಿಕ್ಕವರ ಕೈಯಲ್ಲಿ ಬಿಳಿ ಚೀಲ ಇತ್ತು. ಸಿಕ್ಕವನ ಹೆಸರು ವಿಚಾರ ಮಾಡಿದಾಗ ಅವನು ಆರೀಫ್ ಎಂದು

ಹೇಳಿದ. ಓಡಿ ಹೋದವನ ಹೆಸರು ಹೇಳಿದ ಅಷ್ಟು ನೆನಪಿಲ್ಲ, ಒಬ್ಬನ ಹೆಸರು ಮಾತ್ರ ಗೋಪಾಲ ವಾಲ್ಮೀಕಿ , ಇನ್ನಿಬ್ಬರ ಹೆಸರು ನೆನಪಿಲ್ಲ. ಅವನ ಕೈಯಲ್ಲಿ ಬ್ಯಾಗು ಇತ್ತು ಅದನ್ನು ಪರಿಶೀಲನೆ ಮಾಡಿದರು. ಅದರಲ್ಲಿ ಎರಡು ಚೀಲಗಳು ಇತ್ತು. ಅದನ್ನು ಪರಿಶೀಲನೆ ಮಾಡಲು ಹೇಳಿದರು, ಅದನ್ನು ನೋಡಿದಾಗ ಅದು ವಾಸನೆ ಬರುತ್ತಿತ್ತು. ಅದು ಒಣಗಿದ ಮೊಗ್ಗು ತರಹ ಇತ್ತು. ತೂಕ ಮಾಡುವವರ ಕೈಯಿಂದ ಅದನ್ನು ತೂಕ ಮಾಡಿಸಿದರು. ಒಂದರಲ್ಲಿ 550 ಗ್ರಾಂ ಗಾಂಜಾ ಇತ್ತು, ಇನ್ನೊಂದರಲ್ಲಿ 503 ಗ್ರಾಂ ಗಾಂಜಾ ಇತ್ತು. ಅದು ಒಂದು ರೀತಿ ಘಾಟು ವಾಸನೆ ಬರುತ್ತಿದ್ದುದರಿಂದ ಅದು ಗಾಂಜಾ ಎಂದು ಗೊತ್ತಾಯಿತು.

4. ನಂತರ ಗೆಜೆಟೆಡ್ ಆಫೀಸರ್ ಕಡೆಯಿಂದ ಅಂಗ ಜಪ್ತಿ ಮಾಡಿಸಬೇಕಾ ಎಂದು ಆರೋಪಿಯನ್ನು ಸಾಹೇಬರು ಕೇಳಿದರು. ಆಗ ಅವನು ಗೆಜೆಟೆಡ್ ಆಫೀಸರ್ ಕಡೆಯಿಂದ ಪರಿಶೀಲನೆ ಮಾಡಿಸಬೇಕು ಎಂದು ಆರೋಪಿ ಹೇಳಿದ. ಆಗ ಎಸಿಪಿ ರವರ ಕಡೆಯಿಂದ ಆರೋಪಿಯ ಅಂಗ ಜಪ್ತಿ ಮಾಡಿಸಲಾಯಿತು. ಆ ರೀತಿ ಅಂಗ ಜಪ್ತಿ ಮಾಡಿದಾಗ ಅವನ ಪ್ಯಾಂಟ ಜೇಬನಲ್ಲಿ ರೂ.500 ಇತ್ತು. ಪೋಲೀಸರು ಅದನ್ನು ವಶಪಡಿಸಿಕೊಂಡರು. ಸಿಕ್ಕಿದ್ದ ಗಾಂಜಾ ಕೂಡ ಪ್ಯಾಕ್ ಮಾಡಿ ವಶಪಡಿಸಿಕೊಂಡರು. ಪೋಲೀಸ ಸಿಬ್ಬಂದಿಯವರು ವಿಚಾರ ಮಾಡಿದಾಗ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಯಾರೋ ಕೊಟ್ಟರು ಎಂದು ಆರೋಪಿ ಹೇಳಿದ. ಅಲ್ಲಿ ಪಂಚನಾಮೆ ಮಾಡಿದರು. ಪ್ರಿಂಟರ್ ಇತ್ತು ಅದರಿಂದ ಪ್ರಿಂಟ ತೆಗೆದುಕೊಂಡರು ಅದಕ್ಕೆ ನಾನು ಸಹಿ ಮಾಡಿದ್ದೇನೆ ಸಾಕ್ಷಿ ನಿಶಾನೆ ಪಿಃ 14 ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿ ಮತ್ತು ದಶರಥನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 14 (ಬಿ) ಎಂದು , ಸಾಕ್ಷಿ ಗುರುತಿಸಿದ ದಶರಥ ರವರ ಸಹಿಯನ್ನು ನಿಶಾನೆ ಪಿಃ 14 (ಸಿ) ಎಂದು ಕ್ರಮವಾಗಿ ಗುರುತಿಸಲಾಗಿದೆ ಆ ಸಮಯದಲ್ಲಿ ತೆಗೆದ ಫೋಟೊವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಅದನ್ನು ಈಗಾಗಲೇ ನಿಶಾನೆ ಪಿಃ 15 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಫೋಟೊವನ್ನು ನಿಶಾನೆ ಪಿಃ 15 (ಬಿ) ಎಂದು ಮತ್ತು ಸಾಕ್ಷಿ ಗುರುತಿಸಿದ ದಶರಥನ

ಫೋಟೊ ನಿಶಾನೆ ಪಿಃ 15 (ಸಿ) ಎಂದು ಕ್ರಮವಾಗಿ ಗುರುತಿಸಲಾಯಿತು. ಅದರಲ್ಲಿ ಸಾಕ್ಷಿ ಗುರುತಿಸಿದ ಆರೋಪಿ ಆರೀಫ್ ನ ಫೋಟೊ ನಿಶಾನೆ ಪಿಃ 15(ಡಿ) ಎಂದು ಗುರುತಿಸಲಾಗಿದೆ. ಅದೇರೀತಿ ಸಾಕ್ಷಿ ವಿಸಿ ಮೂಲಕ ಕೂಡ ಆರೋಪಿ ಆರೀಫ್ ನನ್ನು ನೋಡಿ ಗುರುತಿಸಿರುತ್ತಾರೆ. ಇವೆಲ್ಲ ಪ್ರಕ್ರೀಯೆ ಸುಮಾರು ಒಂದುವರೆ ಘಂಟೆ ನಡೆದಿರಬಹುದು ಅಂದರೆ ಸುಮಾರು ಮಧ್ಯಾಹ್ನ 1 ಘಂಟೆ ವರೆಗೆ ನಡೆದಿರಬಹುದು. ನಾವು ಕೂಡ ಪೋಲಿಸಠಾಣೆಗೆ ನಂತರ ಹೋದೆವು. ಆರೋಪಿ ಮತ್ತು ಈ ವಶಪಡಿಸಿಕೊಂಡ ವಸ್ತುಗಳನ್ನು ಕೂಡ ಪೋಲಿಸಠಾಣೆಗೆ ತೆಗೆದುಕೊಂಡು ಹೋದರು. ಮತ್ತೆ ನಾವು ಕೆಲಸಕ್ಕೆ ಹೋದೆವು. ಆ ದಿನ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮುಮಾ-2 ಬ್ಯಾಗ್ ನೋಡಿ ಗುರುತಿಸಿರುತ್ತಾರೆ ಅದೇರೀತಿ ಹಣ ರೂ.500 ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ.

**ಮುಂದಿನ ಮುಖ್ಯ ವಿಚಾರಣೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

5. ಆ ರೀತಿ ವಶಪಡಿಸಿಕೊಂಡ ವಸ್ತುಗಳ ಮೇಲೆ ಸೀಲು ಹಾಕಿ ಆ ಸೀಲನ್ನು ನನಗೆ ಕೊಟ್ಟರು. ಆ ರೀತಿ ಸೀಲು ತೆಗೆದುಕೊಂಡ ಮೇಲೆ ಅವರಿಗೆ ನಿಶಾನೆ ಪಿಃ 16 ರಂತೆ ರಸೀದಿ ಕೊಟ್ಟಿದ್ದೇನೆ ಎಂದು ಸಾಕ್ಷಿ

ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿ ಈಗಾಗಲೇ ನಿಶಾನೆ ಪಿಃ 16 (ಬಿ) ಎಂದು ಗುರುತಿಸಲಾಗಿದೆ. ನಾನು ಬೆಳಿಗ್ಗೆ ಸಾಕ್ಷಿ ಹೇಳುವಾಗ ದಿನಾಂಕ ತಪ್ಪಾಗಿ ದಿಃ 21-3-2023 ಎಂದು ಹೇಳಿದ್ದೆ ಆದರೆ ದಿಃ 21-05-2023. ಆದಿನ ಮೇಲೆ ಹೇಳಿದ ಎಲ್ಲ ಪ್ರಕ್ರೀಯೆ ನಡೆಯಿತು. ಓಡಿ ಹೋದವರು ಯಾರು ಎಂದು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ಓಡಿ ಹೋದವರು ನ್ಯಾಯಾಲಯದಲ್ಲಿರುವ ಆರೋಪಿ ಎಂದು ಗುರುತಿಸಿರುತ್ತಾರೆ. ಆ ರೀತಿ ಕೊಟ್ಟ ಸೀಲನ್ನು ನ್ಯಾಯಾಲಯಕ್ಕೆ ತಂದಿಲ್ಲ. ನಾನು ಮನೆ ಬದಲಾವಣೆ ಮಾಡುವಾಗ ಸೀಲು ಕಳೆದು ಹೋಯಿತು.

**ಪಾಟಿ ಸವಾಲು – ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ದಿಃ 26–02–2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲು 1 ಮತ್ತು 3 ನೇ ಆರೋಪಿ ಪರ ವಿ.ಆರ್.ಎಸ್ ವಕೀಲರಿಂದಃ**

**6.** 13 ವರ್ಷದಿಂದ ನಾನು ಇ ಎಸ್ ಐ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ವೈದ್ಯಕೀಯ ಅಧೀಕ್ಷಕರು ಈ ಕೇಸನಲ್ಲಿ ಪಂಚನಾಮೆಗೆ ಹಾಜರಾಗಲು ವೈಯಕ್ತಿಕವಾಗಿ ಆದೇಶ ಮಾಡಿಲ್ಲ ಅಂದರೆ ಸರಿಯಲ್ಲ. ಲಿಖಿತವಾಗಿ ಆದೇಶ ಕೊಟ್ಟಿದ್ದಾರೆ. ಇದು ಮೊದಲನೇ ಬಾರಿಗೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಬೇರೆ ಯಾವುದೇ ಪ್ರಕರಣದಲ್ಲೂ ಸಾಕ್ಷಿ ಹೇಳಿಲ್ಲ. ಘಟನಾ ಸ್ಥಳದ ಪೂರ್ವಕ್ಕೆ ಕುಷ್ಟರೋಗದ ಆಸ್ಪತ್ರೆ ಇದೆ. ಪಶ್ಚಿಮಕ್ಕೆ ಒಂದು ಕೆರೆ ಇದೆ. ಉತ್ತರಕ್ಕೆ ಸ್ಮಶಾನ ಸ್ವಲ್ಪ ದೂರದಲ್ಲಿದೆ. ನಿಖರವಾಗಿ ಹೇಳಲು ಗೊತ್ತಿಲ್ಲ. ಆ ದಿನ ನಾನು ಕೆಲಸಕ್ಕೆ ಹಾಜರಾದ ಬಗ್ಗೆ ದಾಖಲೆಯಲ್ಲಿ ನಮೂದಾಗಿರುತ್ತದೆ. ಆ ದಾಖಲೆ ನಾನು ಈ ಕೇಸನ ತನಿಖಾಧಿಕಾರಿಗಳಿಗೆ ಕೊಟ್ಟಿಲ್ಲ. ನಾನು ಆದಿನ 11 ಘಂಟೆಗೂ ಮೇಲ್ಪಟ್ಟು ಪೋಲಿಸಠಾಣೆಗೆ ಹೋಗಿದ್ದೆ. ಪೋಲೀಸ ಸಿಬ್ಬಂದಿ ಜೋಡಿ ನಾನು ಆ ಘಟನಾ ಸ್ಥಳಕ್ಕೆ ಹೋಗಿದ್ದೆ. ಆಗ ಎಸಿಪಿ ಸಾಹೇಬರು ಬಂದಿದ್ದರು. ಯಳ್ಳೂರ ಎಂಬ ಠಾಣಾಧಿಕಾರಿ ಇದ್ದರು. ಎಲ್ಲರ ಹೆಸರು ಹೇಳಲು ಬರುವುದಿಲ್ಲ. ಪೋಲೀಸ ಜೀಪ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನಮ್ಮ ಸಮಕ್ಷಮ ಅಂಗ ಜಪ್ತಿ ನೋಟೀಸ ಆರೋಪಿಗೆ ಕೊಟ್ಟಿದ್ದರ ಮೇಲೆ ನಾನು ಸಹಿ ಮಾಡಿದ್ದೇನೆ. ನಾನು ಸಹಿ ಮಾಡಿಲ್ಲ ಅದರೂ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಕೊಟ್ಟ ಸಮ್ಮತಿ ಪತ್ರಕ್ಕೆ ನನ್ನ ಸಹಿ ಇದೆಯೋ ಇಲ್ಲವೋ ನೆನಪಿಲ್ಲ. ಅಲ್ಲಿ ಓಡಿ ಹೋದ ಆರೋಪಿಗಳನ್ನು ಹಿಡಿಯಲು ಹೋದ ವ್ಯಕ್ತಿಗಳ ಹೆಸರು ನನಗೆ ಹೇಳಲು ಆಗುವುದಿಲ್ಲ. ಆದರೆ ಬೈಕನಲ್ಲಿ ಅವರು ಹೋದರು. ಗಿಡಗಂಟಿ ಇರುವ ಕಡೆ ಆರೋಪಿಗಳು ಓಡಿ ಹೋದರು ಅಂದರೆ ಸರಿ. ಅದರ ಒಳಗೆ ವಾಹನ ಹೋಗಲು ಸಾಧ್ಯವಿಲ್ಲ ಅಂದರೆ ಸರಿ ಅದರೆ ಅವರು ಬೇರೆ ಕಡೆ ಹಾದಿಯಲ್ಲಿ ವಾಹನದಿಂದ ಹೋದರು. ಯಾವ ದಾರಿಯಿಂದ ವಾಹನದಲ್ಲಿ ಅವರನ್ನು ಹಿಂಬಾಲಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಗಾಂಜಾ ಆರೋಪಿ ಬಳಿ ಸಿಕ್ಕ ಮೇಲೆ ಆರೋಪಿ ಗೆ

ನೋಟೀಸು ಕೊಟ್ಟು ಅಂದರೆ ಸರಿ. ಆರೋಪಿಗೆ ಯಾವಾಗ ನೋಟೀಸ ಕೊಟ್ಟರು ಎಂದು ನನಗೆ ಹೇಳಲು ಆಗುವುದಿಲ್ಲ. ಪಂಚನಾಮೆ ನಾನು ಹೇಳಿ ಬರೆಸಿಲ್ಲ . ಅದರಲ್ಲಿ ಎನು ಬರೆದಿದೆ ಎಂದು ನೆನಪಿಲ್ಲ. ಪೋಲೀಸರು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಅದರಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಓದಿ ಸಹಿ ಮಾಡಿದ್ದೇನೆ ಈಗ ನನಗೆ ನೆನಪಿಲ್ಲ. ಪೋಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮುಂದಿನ ಪಾಟಿ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು). ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

<u>ಎನ್.ಡಿ.ಪಿ.ಎಸ್. ಸಂಖ್ಯೆ **32/2023**</u>

<u>ಫ್ರಾಸಾ-**02**/ ಚಾಸಾ-**02**</u>

ಫ್ರಾಸಾ-04

ಚಾಸಾ- 07